1. **ಪ್ರಶ್ನೋತ್ತರ**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು : ಮಾನ್ಯ ಕಾರಜೋಳರವರು ನನಗೆ ಹುಷಾರ್ ಇಲ್ಲ, ನನ್ನ ಪ್ರಶ್ನೆಯನ್ನು ಬೇಗ ಕೇಳುವುದಕ್ಕೆ ಹೇಳಿರುತ್ತಾರೆ. ಅವರು ಬಂದಿದ್ದಾರಾ, ಹಾಗಾದರೆ ಹುಷಾರಿಲ್ಲದಿರುವುದರಿಂದ ಅವರಿಗೆ ಅವಕಾಶವನ್ನು ಕೊಟ್ಟು ಬಿಡುತ್ತೇನೆ.

ರೈತರ ಮೇಲೆ ಹೂಡಿದ್ದ ಮೊಕದ್ದಮೆಗಳನ್ನು ವಾಪಸ್ ಪಡೆಯುವ ಬಗ್ಗೆ.

113 (1023) ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) :– ಮಾನ್ಯ ಗೃಹ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2011 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ನಡೆದ ರೈತರ ಮೇಲೆ ಹೂಡಿದ್ದ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ಸಂಪುಟ ಅನುಮೋದನೆಯಾಗಿದ್ದರು ಸಹ ಇದುವರೆವಿಗೂ ಮೊಕದ್ದಮೆಗಳನ್ನು ವಾಪಸ್ಸು ಪಡೆಯದೇ ಇರಲು ಕಾರಣವೇನು;

ಆ) ಮೊಕದ್ದಮೆಗಳನ್ನು ಯಾವಾಗ ವಾಪಸ್ಸು ಪಡೆಯಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):–

ಅ) ಸರ್ಕಾರವು ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುತ್ತಿರುವುದನ್ನು ಪ್ರಶ್ನಿಸಿ ಶ್ರೀ ಅಮೃತೇಶ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ (ಪಿ.ಐ.ಎಲ್) ಸಂಖ್ಯೆ 51049/2012

ಇನ್ನೂ ವಿಚಾರಣೆಯಲ್ಲಿದೆ. ಸದರಿ ವಿಷಯದಲ್ಲಿ ಅಡ್ವೋಕೇಟ್ ಜನರಲ್ ಇವರ ಅಭಿಪ್ರಾಯವನ್ನು ನಿರೀಕ್ಷಿಸಿದೆ. ಆದುದರಿಂದ ಸದರಿ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ ಹಾಗೂ ಮೊಕದ್ದಮೆಗಳನ್ನು ಹಿಂಪಡೆಯಲು ಅಭಿಯೋಜನಾ ಇಲಾಖೆಗೆ ನಿರ್ದೇಶನ ನೀಡಿರುವುದಿಲ್ಲ.

ಆ) ಸದರಿ ರಿಟ್ ಅರ್ಜಿಯ ಬಗ್ಗೆ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಪಡೆದ ನಂತರ ಮೊಕದ್ದಮೆಯನ್ನು ಹಿಂಪಡೆಯುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಉತ್ತರ ನನ್ನ ಕೈಗೆ ಇನ್ನೂ ಸೇರಿಲ್ಲ. ಆದರೆ ನನ್ನ ಪ್ರಶ್ನೆ ಇಷ್ಟೆ ಇದೆ. ರೈತರ ಮೇಲೆ 2011 ರಲ್ಲಿ ಮುಧೋಳ ತಾಲ್ಲೂಕಿನಲ್ಲಿ ಹಾಕಿದಂಥ ಮೊಕದ್ದಮೆಗಳನ್ನು ವಾಪಸ್ಸು ಪಡೆದುಕೊಳ್ಳಬೇಕೆಂದು ಹಿಂದೆ Cabinet decision ಆಗಿತ್ತು. ಇದುವರೆಗೂ ಸರ್ಕಾರದ ಆದೇಶವಾಗಿಲ್ಲ, ಯಾವಾಗ ಸರ್ಕಾರದ ಆದೇಶ ಮಾಡುತ್ತೀರಿ, ಯಾವಾಗ ಕೇಸ್ ವಾಪಸ್ಸು ತೆಗೆದುಕೊಳ್ಳುತ್ತೀರಿ.

ಶ್ರೀ ಕೆ.ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೆ, Cabinet ನಲ್ಲಿ ಈ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿರುವುದು ನಿಜ. ಆದರೆ ಇದನ್ನು ಪ್ರಶ್ನೆ ಮಾಡಿ High Court ಗೆ ಹೋಗಿ ಪಿ.ಐ.ಎಲ್. ಅನ್ನು ಹಾಕಿದ್ದಾರೆ. ಅದಕ್ಕೆ ಅಂದಿನ ಅಡ್ವೋಕೇಟ್ ಜನರಲ್ ನಮಗೆ High Court ನಲ್ಲಿ ತೀರ್ಮಾನ ಆಗುವವರೆಗೆ ನೀವು ತೀರ್ಮಾನ ತೆಗೆದುಕೊಳ್ಳಬಾರದೆಂದು ಹೇಳಿರುವುದರಿಂದ ನಾವು ಪೆಂಡಿಂಗ್ ಇಟ್ಟಿರುತ್ತೇವೆ.

ಅಧ್ಯಕ್ಷರು :– ಆಯಿತು, ಹೈಕೋರ್ಟಿನಲ್ಲಿ ತೀರ್ಮಾನವಾಗುವವರೆಗೂ ಪೆಂಡಿಂಗ್ ಇಟ್ಟಿದ್ದೇವೆಂದು ಹೇಳಿರುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಅದು ಆದ ನಂತರವು ವಾಪಸ್ಸು ತೆಗೆದುಕೊಂಡಿರುವುದು ಇದೆ. ಒಂದೆ ಅಲ್ಲ, ಸಾವಿರಾರು ಕೇಸ್‌ಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಹಾಸನ, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ ರೈತರ ಮೇಲಿನ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆ.

ಅಧ್ಯಕ್ಷರು :– ಅವರು ಹಿಂದಿನ ಸಚಿವ ಸಂಪುಟದ ಬಗ್ಗೆ ಅವರೇನು ವಿರೋಧವಾಗಿ ಹೇಳಲಿಲ್ಲ. ಹೈಕೋರ್ಟ್ ತೀರ್ಮಾನದಂತೆ ವಾಪಸ್ಸು ತೆಗೆದುಕೊಂಡಿರುವುದಿಲ್ಲವೆಂದು ಹೇಳಿದ್ದಾರೆ ಅಷ್ಟೆ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ ಇದೆ. ಅದು ಆದ ನಂತರವೂ ಕೂಡ ರೈತರ ಕೇಸ್‌ಗಳನ್ನು ವಾಪಸ್ಸು ಪಡೆದಿರುತ್ತೇವೆ. ರೈತರು ಕಬ್ಬಿನ ಬೆಲೆ ಹೆಚ್ಚಿಗೆ ಕೊಡಬೇಕೆಂದು ಹೋರಾಟ ಇತ್ತು.

ಶ್ರೀ ಕೆ.ಜೆ. ಜಾರ್ಜ್ :– ಸುಮಾರು 11 ಕೇಸ್‌ಗಳಲ್ಲಿ ನಾವು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಏಕೆಂದರೆ, ಹೈಕೋರ್ಟಿನಲ್ಲಿ ಪಿ.ಐ.ಎಲ್. ಪೆಂಡಿಂಗ್ ಇದೆ. ಹೈಕೋರ್ಟಿನ ಆದೇಶ ಬಂದ ನಂತರ ಆ ವಿಚಾರದಲ್ಲಿ ನಾವು ತೀರ್ಮಾನವನ್ನು ತೆಗೆದುಕೊಂಡು ನಾವು ಆದೇಶ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ :– ಅಧ್ಯಕ್ಷರೆ, ಸಚಿವ ಸಂಪುಟದ ನಿರ್ಣಯವಾದ ನಂತರ ಅದನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಹೇಗೆ ಅಡ್ವೋಕೇಟ್ ಜನರಲ್ ಹೇಳಿದರು ನನಗೆ ಗೊತ್ತಿಲ್ಲ. ಆದರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ರೈತರ ಮೇಲೆ ಪೊಲೀಸ್‌ರು ಹೋಗಿ ಹರಾಸ್‌ಮೆಂಟ್ ಮಾಡುತ್ತಿದ್ದಾರೆ. ರೈತರನ್ನು ಅರೆಸ್ಟ್ ಮಾಡುವುದು ಕೋರ್ಟಿಗೆ ಕಳುಹಿಸುವುದು ಮಾಡುತ್ತಿದ್ದಾರೆ. ದಯವಿಟ್ಟು ಅದನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :– ಮಾನ್ಯ ಕಾರಜೋಳರವರೆ, ಅದನ್ನು ಹೇಗೆ ನಿಲ್ಲಿಸುವುದಕ್ಕೆ ಬರುತ್ತದೆ ಎನ್ನುವುದನ್ನು ದಯವಿಟ್ಟು ಹೇಳಿ ನೋಡೋಣ. ನಾನೂ ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಆ ರೀತಿ ಮಾಡುವುದಕ್ಕೆ ಬರುತ್ತದೆಯೇ? ಸ್ವಲ್ಪ ಸಮಾಧಾನ ಮಾಡಿ. ಏಕೆ ಗಡಿಬಿಡಿ ಮಾಡುತ್ತೀರಿ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– ಗಡಿಬಿಡಿ ಅಲ್ಲ, ರೈತರಿಗೆ ತೊಂದರೆ ಆಗಬಾರದು ಎನ್ನುವ ಸಲುವಾಗಿ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :– ಕೋರ್ಟ್‌ನಲ್ಲಿರುವ ಕೇಸ್ ನೀವು ಅವರನ್ನು ಕರೆಯಬೇಡಿ, ಹೋಗಬೇಡಿ ಎಂದು ಸರ್ಕಾರದವರು ಹೇಳುವುದಕ್ಕೆ ಬರುತ್ತದೆಯೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– ಅದಕ್ಕೆ ಕಳಕಳಿಯಾಗಿ ಪೊಲೀಸ್‌ನವರಿಗೆ ಒಂದು ಸೂಚನೆ ಕೊಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :– ಮಾನ್ಯ ಕಾರಜೋಳರವರು ಹಿರಿಯ ಸದಸ್ಯರು. ಮಂತ್ರಿಮಂಡಲದಲ್ಲಿ ಇದ್ದವರು. ಅವರ ಮಂತ್ರಿಮಂಡಲದಲ್ಲಿ ಆಗಿದ್ದು, 2011ರಲ್ಲಿ ಫೆಬ್ರವರಿ ತಿಂಗಳಿನಲ್ಲಿ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆದೇಶ ಮಾಡಿತ್ತು.

ಅಧ್ಯಕ್ಷರು :– ಅವರಿಗೆ ಮರೆತು ಹೋಗಿತ್ತು. ಕೊನೆಗೆ ಈಗ ನೆನಪಾದಾಗ

ಕೇಳುತ್ತಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್ :– ಇದಾದ ಮೇಲೆ ಈಗ ನಮ್ಮ ಸರ್ಕಾರದ ಮುಂದೆ ಇದೆ. ಹೈಕೋರ್ಟ್‌ನ ತೀರ್ಮಾನ ಆದ ಮೇಲೆ, ಅದರ ಬಗ್ಗೆ ನಮ್ಮ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು :– ಸಾಕು ಅದರ ಬಗ್ಗೆ ಏನೂ ಪ್ರಶ್ನೆ ಇಲ್ಲ. ಮಾನ್ಯ ಶಿವಲಿಂಗೇಗೌಡರು ಮಾತನಾಡುವುದು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– Particular case ನಲ್ಲಿ PIL ಆಗಿದ್ದರೆ ಹೇಳಲಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :– ಕೋರ್ಟ್‌ನ ಮುಂದೆ ಇರುವ same 11 case ಗಳು ಏನಿವೆ, ಯಾವುದೇ ಮೊಕದ್ದಮೆ ಆದ ಮೇಲೆ ಅದನ್ನು ಹಿಂದೆ ಪಡೆಯುವುದಕ್ಕೆ ಕ್ಯಾಬಿನೆಟ್‌ಗೆ ಅಧಿಕಾರ ಇದೆಯೋ ಇಲ್ಲವೋ ಎನ್ನುವ ವಿಚಾರದಲ್ಲಿ ಇವತ್ತು question ಮಾಡಿದ್ದಾರೆ. ನಿಮ್ಮ Advocate General ನವರೆ ಕೋರ್ಟ್ ಆದೇಶ ಬರುವ ತನಕ ಇದರಲ್ಲಿ ತೀರ್ಮಾನ ತೆಗೆದುಕೊಳ್ಳಬಾರದೆಂದು ಸರ್ಕಾರಕ್ಕೆ ಅಭಿಪ್ರಾಯ ಕೊಟ್ಟಿದ್ದಾರೆ. ಅದರ ಪ್ರಕಾರ ಪೆಂಡಿಂಗ್ ಇಟ್ಟಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– ನಾವು ಇದ್ದಾಗ ಅಧಿಕಾರ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಕಾರಜೋಳರವರೆ, ಇದರ ಬಗ್ಗೆ ಚರ್ಚೆ ಸಾಕು. ಬೇಕಾದರೆ ಬೇರೆ ರೂಪದಲ್ಲಿ ತನ್ನಿ. ಮಾನ್ಯ ಶಿವಲಿಂಗೇಗೌಡರು ಮಾತನಾಡುವುದು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :- ನಾನು ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. PIL ಹಾಕಿದವರ ಹೆಸರನ್ನು ಹೇಳಿ. ಹುಷಾರಿಲ್ಲವೆಂದರೂ ಕೇಳುತ್ತಿದ್ದೇನೆ. ಅನಿವಾರ್ಯವಾಗಿದೆ. ರೈತರು ಗಲಾಟೆ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು :- ಆಯಿತು, ಎಷ್ಟು ವರ್ಷ ಮಂತ್ರಿಗಳಾಗಿದ್ದಿರಿ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :- ಸರ್, PIL ಹಾಕಿದವರ ಹೆಸರು ಹೇಳಲಿ.

(ಗೊಂದಲ)

ಅಧ್ಯಕ್ಷರು :- ಆಯಿತು, ಮಾಡುತ್ತಾರೆ ಬಿಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :- ಇಲ್ಲ ಸರ್, PIL ಹಾಕಿದವರ ಹೆಸರು ಹೇಳಲಿ, ಈ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಳ್ಳಬಾರದೆಂದು ಯಾರು ಕೋರ್ಟ್‌ನಲ್ಲಿ ಹಾಕಿದ್ದಾರೆ, PIL ಹಾಕಿದ್ದಾರೆ ಅವರ ಹೆಸರನ್ನು ಹೇಳಲಿ.

(ಗೊಂದಲ)

ಅಧ್ಯಕ್ಷರು :- PIL ಹಾಕಿದವರ ಹೆಸರೇ? ಆಯಿತು ಮಾನ್ಯ ಸಚಿವರೆ, ಯಾರಾದರೂ ಹಾಕಿದ್ದರೆ ಅವರ ಹೆಸರು ಹೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :- ಅಮೃತೇಶ್ ಎನ್ನುವವರು PIL ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಆಯಿತು, ಈಗ ಮಾನ್ಯ ಶಿವಲಿಂಗೇಗೌಡರು ಪ್ರಶ್ನೆಯನ್ನು ಕೇಳುವುದು.

KIADB ಯಿಂದ ಜಮೀನು ನೀಡುವುದು

106 (1043) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) :- ಮಾನ್ಯ ಮುಖ್ಯಮಂತ್ರಿಯವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿ ಎರಡು ಬಾರಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲಾಗಿದ್ದು ಇದುವರೆವಿಗೂ ಎಷ್ಟು ಜನ ಕೈಗಾರಿಕೋದ್ಯಮಿಗಳಿಗೆ ಕೆ.ಐ.ಎ.ಡಿ.ಬಿ. ಇಲಾಖೆಯಿಂದ ಜಮೀನು ನೀಡಲಾಗಿದೆ; (ವಿವರ ನೀಡುವುದು)

ಆ) ಜಮೀನು ಪಡೆದ ಕೈಗಾರಿಕೋದ್ಯಮಿಗಳು ಯಾವ ಯಾವ ಕೈಗಾರಿಕೆಗಳನ್ನು ಎಲ್ಲೆಲ್ಲಿ ಸ್ಥಾಪಿಸಿದ್ದಾರೆ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು) :-

ಅ) 2010ರಲ್ಲಿ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಅನುಮೋದನೆಗೊಂಡ ಯೋಜನೆಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ